ಕರ್ನಾಟಕ ಸರ್ಕಾರ

ಸಂ.ಕೈತಉ/ತರಬೇತಿ/ವೃಪವಿ/ಕುತಯೋ-2/ವಿವ-01/2022-23

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ
ಆಯುಕ್ತಾಲಯ
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029,
ದಿನಾಂಕ:26-05-2022

## ಅಧಿಸೂಚನೆ

**ವಿಷಯ** : ಆಗಸ್ಟ್-2022 ರಲ್ಲಿ ನಡೆಯುವ ಅಖಿಲ ಭಾರತ ವೃತ್ತಿ ಪರೀಕ್ಷೆಗೆ (ANNUAL/ DST) ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ.

**ಉಲ್ಲೇಖ** :
1. ಸರ್ಕಾರಿ ಆದೇಶ ಸಂಖ್ಯೆ:ಕಾಇ 98 ಇಟಿಐ 2000 ದಿನಾಂಕ:31-01-2003.
2. ಸರ್ಕಾರದ ಆದೇಶ ಸಂಖ್ಯೆ: ಕಾಇ 40 ಇಟಿಐ 2005 ಬೆಂಗಳೂರು, ದಿನಾಂಕ :24-03-2005.
3. ಡಿಜಿಟಿ ನವದೆಹಲಿರವರ ಪತ್ರ ಸಂಖ್ಯೆ :DGT-Aff0misc/5/2021-O/o DIR (TC) ದಿನಾಂಕ:25-03-2022.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3) ರ ಡಿ.ಜಿ.ಟಿ. ನವದೆಹಲಿರವರ ಪತ್ರದನುಸಾರ ಆಗಸ್ಟ್-2022 ರ ಮಾಹೆಯಲ್ಲಿ ಅಖಿಲ ಭಾರತ ವೃತ್ತಿ ಪರೀಕ್ಷೆಯನ್ನು (ANNUAL / DST) ನಡೆಸುವುದಾಗಿ ತಿಳಿಸಿದ್ದು, ಈ ಸಂಬಂಧ ಆಗಸ್ಟ್-2022 ರಲ್ಲಿ ನಡೆಯಲಿರುವ ಅಖಿಲ ಭಾರತ ವೃತ್ತಿ ಪರೀಕ್ಷೆಗೆ (ANNUAL / DST) ಅರ್ಜಿ ಸಲ್ಲಿಸಲು ಹಾಗೂ ನಿಗದಿತ ಶುಲ್ಕವನ್ನು ಪಾವತಿಸಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಕೆಳಕಂಡಂತೆ ಕ್ರಮಕೈಗೊಳ್ಳುವುದು.

### ದಂಡಶುಲ್ಕ ರಹಿತವಾಗಿ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ:04-06-2022

1. ಆಗಸ್ಟ್ 2020 ರಲ್ಲಿ (2020-22) ಪ್ರವೇಶ ಪಡೆದ 2 ವರ್ಷ ತರಬೇತಿ ಅವಧಿಯ ವೃತ್ತಿಗಳ 2ನೇ ವರ್ಷದ ನಿಯತ ತರಬೇತಿದಾರರು.
2. ಆಗಸ್ಟ್ 2021 ರಲ್ಲಿ (2021-23) ಪ್ರವೇಶ ಪಡೆದ 2 ವರ್ಷ ತರಬೇತಿ ಅವಧಿಯ ವೃತ್ತಿಗಳ 1ನೇ ವರ್ಷದ ನಿಯತ ತರಬೇತಿದಾರರು.
3. ಆಗಸ್ಟ್ 2021 ರಲ್ಲಿ (2021-22) ಪ್ರವೇಶ ಪಡೆದ 1 ವರ್ಷ / 6 ತಿಂಗಳು ತರಬೇತಿ ಅವಧಿಯ ವೃತ್ತಿಗಳ ನಿಯತ ತರಬೇತಿದಾರರು.

ಮೇಲ್ಕಂಡ ನಿಯತ ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಪಾವತಿಸುವುದು.

1. ಆಯಾ ಸಂಸ್ಥೆಯ ಪ್ರಾಚಾರ್ಯರು ಶುಲ್ಕ ಪಾವತಿಸಿದ ರಶೀದಿ, ಭರ್ತಿ ಮಾಡಿದ ನಿಗದಿತ ಅರ್ಜಿಯೊಂದಿಗೆ ನಿರೂಪಣಾ ಪಟ್ಟಿಯೊಂದಿಗೆ (Soft copy & Hard Copy) ಸಂಬಂಧಿಸಿದ ಪರೀಕ್ಷಾ ಕೇಂದ್ರಕ್ಕೆ ದಿನಾಂಕ :06-07-2022 ರೊಳಗೆ ಸಲ್ಲಿಸಲು ತಿಳಿಸಲಾಗಿದೆ.
2. ಪರೀಕ್ಷಾ ಕೇಂದ್ರ ಪ್ರಾಚಾರ್ಯರು ಪರೀಕ್ಷಾ ಅರ್ಜಿಗಳನ್ನು ಮತ್ತು ಪ್ರವೇಶ ಪತ್ರಗಳನ್ನು ಪರೀಕ್ಷಾ ಕೇಂದ್ರದಲ್ಲೇ ಇರಿಸಿಕೊಳ್ಳುವುದು. ಪರೀಕ್ಷಾ ಶುಲ್ಕ ಪಾವತಿಸಿದ ರಶೀದಿಯೊಂದಿಗೆ ಕ್ರೋಢೀಕರಿಸಿ, ನಿರೂಪಣಾ ಪಟ್ಟಿಯನ್ನು ಸಂಬಂಧಿಸಿದ ವಿಭಾಗೀಯ ಕಛೇರಿಗೆ ತಪ್ಪದೇ ದಿನಾಂಕ :08-07-2022 ರೊಳಗೆ ಸಲ್ಲಿಸುವುದು.
3. ಜಂಟಿ ನಿರ್ದೇಶಕರು(ತರಬೇತಿ), ವಿಭಾಗೀಯ ಕಚೇರಿ-ಇವರು ಪರೀಕ್ಷಾವಾರು, ಸಂಸ್ಥೆವಾರು, ಪರೀಕ್ಷಾ ಕೇಂದ್ರವಾರು ಕ್ರೋಢೀಕರಿಸಿದ ನಿರೂಪಣಾ ಪಟ್ಟಿಗಳನ್ನು (Soft copy & Hard Copy) ಪರೀಕ್ಷಾ ಶುಲ್ಕ ಪಾವತಿ

ಪು.ತಿ.ನೋ.,

ರಶೀದಿಗಳೊಂದಿಗೆ ನಿಯತ ತರಬೇತಿದಾರರ ಮಾಹಿತಿ ಕ್ರೋಢೀಕರಿಸಿದ ವಿವರಗಳನ್ನು ಜಂಟಿ ನಿರ್ದೇಶಕರು, ಪರೀಕ್ಷಾ ವಿಭಾಗದ ಆಯುಕ್ತಾಲಯ ರವರಿಗೆ ದಿನಾಂಕ :12-07-2022 ರೊಳಗೆ ಸಲ್ಲಿಸುವುದು

| ಪರೀಕ್ಷಾ ಶುಲ್ಕ ಕುಶಲ ತರಬೇತಿ ಯೋಜನೆ ಪರೀಕ್ಷೆಗೆ ಅನ್ವಯವಾಗುವಂತೆ | |
|---|---|
| ಅ) ನಿಯತ ಅಭ್ಯರ್ಥಿಗಳಿಗೆ | ರೂ. 250/- ನಿಯತ ಅಭ್ಯರ್ಥಿಗಳಿಗೆ<br>ಅರ್ಜಿ ಶುಲ್ಕ ಪ್ರತ್ಯೇಕ ರೂ. 20/- |
| ದಂಡ ಶುಲ್ಕ ದಿ:04-06-2022 ರ ನಂತರ 40 ದಿನಗಳವರೆಗೆ)<br>1) 1ನೇ ದಿನದಿಂದ 10 ದಿನಗಳವರೆಗೆ ದಿನಕ್ಕೆ ರೂ.10/-ರಂತೆ ರೂ.100/-<br>2) 11ನೇ ದಿನದಿಂದ 30 ದಿನಗಳವರೆಗೆ ರೂ.100/- + ದಿನಕ್ಕೆ ರೂ.20/-ರಂತೆ 20 ದಿನಗಳಿಗೆ ರೂ.400/-<br>3) 31ನೇ ದಿನದಿಂದ 40 ದಿನಗಳವರೆಗೆ ಒಟ್ಟು ರೂ.800/- ಗಳು. | ಡಿ.ಜಿ.ಟಿ. ನವದೆಹಲಿರವರ "CALENDER OF EVENTS" ನಂತೆ ಪರೀಕ್ಷಾ ಶುಲ್ಕ ಪಾವತಿಸಿ, ವಿವರಗಳನ್ನು MIS Portal ನಲ್ಲಿ upload ಮಾಡುವ ದಿನಾಂಕ ಬದಲಾವಣೆವಿದ್ದಲ್ಲಿ, ಅದರಂತೆ ಉಲ್ಲೇಖ (1) & (2) ರ ಸರ್ಕಾರಿ ಆದೇಶಗಳನುಸಾರ ದಂಡ ಶುಲ್ಕವಿಲ್ಲದೆ ಪರೀಕ್ಷಾ ಶುಲ್ಕ ಪಾವತಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದ ನಂತರ ಅನ್ವಯವಾಗುವಂತೆ ದಂಡಶುಲ್ಕವನ್ನು ಪಾವತಿಸಿಕೊಳ್ಳುವುದು. |

**ವಿಶೇಷ ಸೂಚನೆಗಳು:**

1. ಡಿ.ಜಿ.ಟಿ. ನವದೆಹಲಿಯವರ "CALENDER OF EVENTS" ನಲ್ಲಿ ಪರೀಕ್ಷಾ ಶುಲ್ಕ Fee Status ಮಾಹಿತಿ MIS Portal ನಲ್ಲಿ upload ಮಾಡಲು ನಿಗದಿಪಡಿಸಿದ ದಿನಾಂಕದವರೆಗೆ ಮಾತ್ರ ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳಲು ಹಾಗೂ ಸದರಿ ದಿನಾಂಕದವರೆಗೆ ಮಾಹಿತಿ MIS Portal ನಲ್ಲಿ upload ಮಾಡುವುದು ಹಾಗೂ ಡಿ.ಜಿ.ಟಿ. ನವದೆಹಲಿರವರು ನೀಡುವ ಸೂಚನೆಗಳನ್ನು ಪಾಲಿಸುವುದು ಆಯಾ ಸಂಸ್ಥೆಯ ಪ್ರಾಚಾರ್ಯರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.
2. ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತರಬೇತಿದಾರರ ವಿವರಗಳನ್ನು (ತರಬೇತಿದಾರರ ಹೆಸರು, ತಂದೆಯ ಹೆಸರು ಮತ್ತು ಜನ್ಮ ದಿನಾಂಕ ಇವುಗಳನ್ನು) ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆಯೇ ಸರಿಯಾಗಿ ಪರಿಶೀಲಿಸಿ ನಮೂದಿಸುವುದು ಹಾಗೂ ವೃತ್ತಿ ಘಟಕದ ಸಂಯೋಜನೆ ಸಂಖ್ಯೆಯನ್ನು ಸಂಯೋಜನೆ ಪತ್ರದಲ್ಲಿರುವಂತೆಯೇ (ಜಾರಿಯಾದ ವರ್ಷದ ಸಹಿತ) ಕೈಗಾರಿಕಾ ತರಬೇತಿ ಸಂಸ್ಥೆಯ ಹೆಸರನ್ನು ನಮೂದಿಸುವುದು. NCVT MIS Portal ನಲ್ಲಿ ಲಭ್ಯವಿರುವ ವೃತ್ತಿವಾರು ಅಭ್ಯರ್ಥಿಗಳ ಸ್ಥಾನಗಳು ಮೀರದಂತೆ ಎಚ್ಚರಿಕೆ ವಹಿಸುವುದು. ಸೂಚನೆಗಳನ್ನು ಸರಿಯಾಗಿ ಪಾಲಿಸದೇ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಿಸಿದ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಸ್ಪಷ್ಟಪಡಿಸಿದೆ. ಹಾಗೂ ಅನುತ್ತೀರ್ಣ ತರಬೇತಿದಾರರ ಸ್ಪಷ್ಟವಾದ ಮಾಹಿತಿಯನ್ನು ತಮ್ಮ ವಿಭಾಗೀಯ ಕಚೇರಿಯ ಜಂಟಿ ನಿರ್ದೇಶಕರಿಗೆ ಸಕಾಲದಲ್ಲಿ ನೀಡುವುದು.
3. CBT ಪರೀಕ್ಷೆಗೆ ಸಂಬಂಧಿಸಿದಂತೆ ಉಲ್ಲೇಖ (3) ರಲ್ಲಿನ DGT ನವದೆಹಲಿರವರ ಪತ್ರದಂತೆ ಕ್ರಮವಹಿಸುವುದು.
4. ಈ ಕೆಳಕಂಡ ಸಾಲಿನಲ್ಲಿ ಪ್ರವೇಶ ಪಡೆದ Annual / DST System ನಿಯತ ತರಬೇತಿದಾರರು ಮಾತ್ರವೇ ಈ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
    - ಆಗಸ್ಟ್ 2020 ರಲ್ಲಿ (2020-22) ಪ್ರವೇಶ ಪಡೆದ 2 ವರ್ಷ ತರಬೇತಿ ಅವಧಿಯ ವೃತ್ತಿಗಳ 2ನೇ ವರ್ಷದ ನಿಯತ ತರಬೇತಿದಾರರು.

ಪು.ತಿ.ನೋ.,

- ಆಗಸ್ಟ್ 2021 ರಲ್ಲಿ (2021–23) ಪ್ರವೇಶ ಪಡೆದ 2 ವರ್ಷ ತರಬೇತಿ ಅವಧಿಯ ವೃತ್ತಿಗಳ 1ನೇ ವರ್ಷದ ನಿಯತ ತರಬೇತಿದಾರರು.
- ಆಗಸ್ಟ್ 2021 ರಲ್ಲಿ (2021–22) ಪ್ರವೇಶ ಪಡೆದ 1 ವರ್ಷ / 6 ತಿಂಗಳು ತರಬೇತಿ ಅವಧಿಯ ವೃತ್ತಿಗಳ ನಿಯತ ತರಬೇತಿದಾರರು.

Manjula
ಆಯುಕ್ತರು
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ
26/05/22

ಇವರಿಗೆ,

ಪ್ರಾಚಾರ್ಯರು,
ಸರ್ಕಾರಿ / ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆ,

---

**ಪ್ರತಿಯನ್ನು:**

1. ಮಾನ್ಯ ಆಯುಕ್ತರ ಆಪ್ತ ಶಾಖೆ, ಆಯುಕ್ತಾಲಯ ರವರ ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರ ಆಪ್ತ ಶಾಖೆ, ಆಯುಕ್ತಾಲಯ ರವರ ಮಾಹಿತಿಗಾಗಿ.
3. ಜಂಟಿ ನಿರ್ದೇಶಕರು(ತ), ವಿಭಾಗೀಯ ಕಚೇರಿ ಬೆಂಗಳೂರು / ಮೈಸೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಹಾಗೂ ತಮ್ಮ ವಿಭಾಗೀಯ ವ್ಯಾಪ್ತಿಗೊಳಪಡುವ ಸರ್ಕಾರಿ / ಅನುದಾನಿತ / ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಕೂಡಲೇ ಮಾಹಿತಿಯನ್ನು ರವಾನಿಸಲು ಸೂಕ್ತ ಕ್ರಮಕೈಗೊಳ್ಳುವುದು.